# ಮುಸುರೆ ತೊಳೆಯಬೇಕು ಈ ಮನಸಿನ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has mostly followed these wordings.

ರಾಗ: ಧನಶ್ರೀ ತಾಳ: ಮಟ್ಟೆ

ಮುಸುರೆ ತೊಳೆಯಬೇಕು, ಈ ಮನಸಿನ
ಮುಸುರೆ ತೊಳೆಯಬೇಕು || ಪ ||

ಮುಸುರೆ ತೊಳೆಯಬೇಕು , ಗುಸುಗುಸು ಬಿಡಬೇಕು
ಈಶ ಪ್ರೇರಣೆಯೆಂಬೊ , ಹಸಿಯ ಹುಲ್ಲನು ಹಾಕಿ || ಅಪ ||

ಅಷ್ಟಮದದಿಂದ ಸುಟ್ಟ ಈ ಪಾತ್ರೆಯ
ವಿಷ್ಣು ನಾಮವೆಂಬೊ ಕೃಷ್ಣಾ ನದಿಯಲ್ಲಿ || 1 ||

ಕಾಮ ಕ್ರೋಧದಿಂದ ಬೆಂದ ಈ ಪಾತ್ರೆಯ
ರಾಮ ಕೃಷ್ಣನೆಂಬೊ ಹೇಮಾ ನದಿಯಲ್ಲಿ || 2 ||

ವಿಷವೆಂಬೊ ಪಾತ್ರೆಯ ಮುಸುರೆ ತೊಳದಿಟ್ಟು
ಬಿಸಜಾಕ್ಷ ಪುರಂದರ ವಿಠಲಗರ್ಪಿಸೋ ನಿತ್ಯ || 3 ||

**Classification:** Mundige
**Ankita:** purandara vittala
**Location:** NA
**Category:** Jeevanoddhara
**Sub-Category:** Krishna, rama, Vishnu, visha, sittu, nadi, mana,
**Pravachana:** NA
**Explanation:** NA